ಅ) 1995-96 ಸಾಲಿನಲ್ಲಿ ಮೀನುಗಾರಿಕಾ ಕೊಂಡಿ ರಸ್ತೆಗಳ ನಿರ್ಮಾಣಕ್ಕಾಗಿ ರೂ. 55.00 ಲಕ್ಷ ಅನುದಾನ ಒದಗಿಸಲಾಗಿದ್ದು, ಇದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಗೆ ರೂ. 35.00 ಲಕ್ಷ, ಉತ್ತರ ಕನ್ನಡ ಜಿಲ್ಲೆಗೆ ರೂ. 15.00 ಲಕ್ಷ ಹಾಗೂ ಮೈಸೂರು ಜಿಲ್ಲೆಗೆ ರೂ. 5.00 ಲಕ್ಷ ಅನುದಾನ ನೀಡಲಾಗಿದೆ.

ಆ) ಉಳ್ಳಾಲ ವಿಧಾನಸಭಾ ಕ್ಷೇತ್ರದಲ್ಲಿ ಒಂದು ರಸ್ತೆಯನ್ನು ರೂ. 0.96 ಲಕ್ಷ ವೆಚ್ಚದಲ್ಲಿ ಕೈಗೆತ್ತಿಕೊಳ್ಳಲಾಗಿದೆ.

**ಜಾನಪದ ಪರಂಪರೆ ಉಳಿಸುವಲ್ಲಿ ಸರ್ಕಾರದ ಕಾರ್ಯಕ್ರಮ**

55 - ಶ್ರೀ ಕೆ. ಜಯರಾಮ ಶೆಟ್ಟಿ (ಉಳ್ಳಾಲ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ರಾಜ್ಯದಲ್ಲಿ ಜಾನಪದ, ಸಾಹಿತ್ಯ, ನೃತ್ಯ, ನಾಟಕ, ಯಕ್ಷಗಾನ ಇವೇ ಮುಂತಾದ ಕರ್ನಾಟಕ ಜಾನಪದ ಪರಂಪರೆಯನ್ನು ಉಳಿಸಿ ಬೆಳೆಸುವಲ್ಲಿ ಸರ್ಕಾರ ಯಾವ ಯಾವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ ಮತ್ತು 1995-96ರಲ್ಲಿ ಎಷ್ಟು ಅನುದಾನ ಬಿಡುಗಡೆ ಮಾಡಿದೆ;*

*ಆ) ಈ ಬಗ್ಗೆ ರಾಜ್ಯಸರ್ಕಾರ ಜಿಲ್ಲಾ ಮಟ್ಟದಲ್ಲಿ ಯಾವ ಯಾವ ಕಾರ್ಯಕ್ರಮಗಳನ್ನು ಆಳವಡಿಸಿಕೊಂಡಿದೆ?*

ಶ್ರೀ ಎಂ.ಪಿ. ಪ್ರಕಾಶ್ (ಕನ್ನಡ ಮತ್ತು ಸಂಸ್ಕೃತಿ ಮತ್ತು ಗ್ರಾಮೀಣಾಭಿವೃದ್ಧಿ ಸಚಿವರು) :

ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಅಕಾಡೆಮಿಗಳು ರಾಜ್ಯದಾದ್ಯಂತ ಕಲೆ, ಸಾಹಿತ್ಯ, ನೃತ್ಯ, ನಾಟಕ, ಯಕ್ಷಗಾನ, ಜಾನಪದ ಹಾಗೂ ಲಲಿತಕಲೆಗಳನ್ನು ಪ್ರೋತ್ಸಾಹಿಸುವ ದೃಷ್ಟಿಯಿಂದ ವಿಚಾರ ಸಂಕಿರಣ, ಸಂಸ್ಕೃತಿ ಸುದನ, ಅಂತಾರಾಜ್ಯ ಸಾಂಸ್ಕೃತಿಕ ವಿನಿಮಯ ಕಾರ್ಯಕ್ರಮಗಳು, ಶಿಬಿರಗಳು, ಕಮ್ಮಟಗಳು, ಉತ್ಸವಗಳು, ರಾಷ್ಟ್ರೀಯ ಹಬ್ಬಗಳ ಆಚರಣೆ, ಪ್ರಕಟಣೆ ಮತ್ತು ಸಾಹಿತ್ಯಕ ಹಾಗೂ ಸಾಂಸ್ಕೃತಿಕ ಸಂಘ ಸಂಸ್ಥೆಗಳಿಗೆ ಈ ಉದ್ದೇಶಗಳಿಗಾಗಿ ಧನಸಹಾಯ ನೀಡುವುದು ಮುಂತಾದ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದೆ. ಈ ಉದ್ದೇಶಕ್ಕಾಗಿ ಆಯವ್ಯಯದಲ್ಲಿ 557.00 ಲಕ್ಷ ರೂ. (ಯೋಜನೆ) ಹಾಗೂ 471.66 ಲಕ್ಷ ರೂ. (ಯೋಜನೇತರ) ಶೀರ್ಷಿಕೆಯಡಿ ಒದಗಿಸಿದೆ.

ಆ) 'ಅ' ನಲ್ಲಿ ತಿಳಿಸಿರುವಂತೆ ಜಿಲ್ಲಾ ಮಟ್ಟದಲ್ಲೂ ಕಾರ್ಯಕ್ರಮಗಳನ್ನು ನಡೆಸಲಾಗುತ್ತಿದೆ.

**ಕಾಮಗಾರಿಯ ಅಳತೆ ಪುಸ್ತಕಗಳ ಪ್ರತಿಯನ್ನು ಶಾಸಕರಿಗೆ ಒದಗಿಸುವುದು**

479 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

*ಅ) ಕ್ಷೇತ್ರ ಕಾಮಗಾರಿಯ ಅಳತೆ ಪುಸ್ತಕಗಳ ಪ್ರತಿಯನ್ನು ಚುನಾವಣ ಕ್ಷೇತ್ರದ ಶಾಸಕರಿಗೆ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮವೇನು?*

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಇಂತಹ ಪ್ರಸ್ತಾಪ ಸರ್ಕಾರದಲ್ಲಿ ಇರುವುದಿಲ್ಲ.

**ಕಾಮಗಾರಿಯ ಅಳತೆ ಪುಸ್ತಕಗಳ ಪ್ರತಿಯನ್ನು ಸಾರ್ವಜನಿಕರಿಗೆ ಒದಗಿಸುವುದು**

480 - ಶ್ರೀ ಟಿ.ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕಾಮಗಾರಿಯ ಅಳತೆ ಪುಸ್ತಕದ ಪ್ರತಿಯನ್ನು ಸಾರ್ವಜನಿಕರಿಗೆ ಒದಗಿಸಲು ಸರ್ಕಾರ ಕೈಗೊಂಡಿರುವ ಕ್ರಮಗಳೇನು?

ಆ) ಈ ವ್ಯವಸ್ಥೆಯನ್ನು ಎಷ್ಟು ದಿನಗಳಲ್ಲಿ ಮಾಡಲಾಗುವುದು?

ಶ್ರೀ ಶಿವಾನಂದ ಹೆಚ್. ಕೌಜಲಗಿ (ಲೋಕೋಪಯೋಗಿ ಸಚಿವರು) :

ಅ) ಇಂತಹ ಪ್ರಸ್ತಾಪ ಸರ್ಕಾರದಲ್ಲಿ ಇರುವುದಿಲ್ಲ.

ಆ) ಪ್ರಶ್ನೆ ಉದ್ಭವಿಸುವುದಿಲ್ಲ.

**ಮೀನುಗಾರರಿಗೆ ಗ್ರೂಪ್ ಹೌಸಿಂಗ್ ಮಂಜೂರಾತಿ**

532 - ಡಾ॥ ಎಂ.ಪಿ. ಕರ್ಕಿ (ಕುಮಟಾ) : ಮಾನ್ಯ ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಮೀನುಗಾರರಿಗೆ ಗ್ರೂಪ್ ಹೌಸಿಂಗ್ ಯೋಜನೆಯಡಿ ಕೇಂದ್ರ ಸರ್ಕಾರದಿಂದ ಮಂಜೂರಾದ ಹಣ ಎಷ್ಟು; ಹಾಗೂ ಅದರ ಗುರಿ ಎಷ್ಟು?

ಆ) ರಾಜ್ಯದಲ್ಲಿ ಈ ಯೋಜನೆಯಡಿ ಎಷ್ಟು ಮನೆ ಮಂಜೂರಾಗಿದೆ?

ಇ) ಉತ್ತರ ಕನ್ನಡ ಜಿಲ್ಲೆಯಲ್ಲಿ ಕುಮಟಾ ಮತ್ತು ಹೊನ್ನಾವರ ತಾಲ್ಲೂಕುಗಳಲ್ಲಿ ಮಂಜೂರಾದ ಮನೆಗಳೆಷ್ಟು?

ಶ್ರೀ ಕೆ. ಜಯಪ್ರಕಾಶ್ ಹೆಗ್ಡೆ (ಮೀನುಗಾರಿಕೆ ಮತ್ತು ಬಂದರು ರಾಜ್ಯ ಸಚಿವರು) :

ಅ) ಮೀನುಗಾರರ ಗುಂಪು ಮನೆಯೋಜನೆಯಡಿ ಕೇಂದ್ರ ಸರ್ಕಾರದಿಂದ ರೂ. 180.2476 ಲಕ್ಷ ಹಣವನ್ನು 1589 ಮನೆಗಳನ್ನು 48 ಕೊಳವೆ ಬಾವಿಗಳನ್ನು ಮತ್ತು 7 ಸಾಮೂಹಿಕ ಭವನವನ್ನು ನಿರ್ಮಿಸುವ ಗುರಿಯ ಮಂಜೂರಾತಿ ನೀಡಿರುತ್ತದೆ.

ಆ) ರಾಜ್ಯದ 32 ಸ್ಥಳಗಳಲ್ಲಿ 1589 ಮನೆಗಳು ಮಂಜೂರಾಗಿದೆ:

| | | | |
|---|---|---|---|
| 1) | ಮಂಡ್ಯ ಜಿಲ್ಲೆ | - | 250 |
| 2) | ಮೈಸೂರು ಜಿಲ್ಲೆ | - | 340 |
| 3) | ಹಾಸನ ಜಿಲ್ಲೆ | - | 139 |
| 4) | ಶಿವಮೊಗ್ಗ ಜಿಲ್ಲೆ | - | 123 |
| 5) | ಉತ್ತರ ಕನ್ನಡ ಜಿಲ್ಲೆ | - | 99 |
| 6) | ದಕ್ಷಿಣ ಕನ್ನಡ ಜಿಲ್ಲೆ | - | 109 |
| 7) | ಬೆಳಗಾಂ ಜಿಲ್ಲೆ | - | 217 |
| 8) | ಗುಲಬರ್ಗ ಜಿಲ್ಲೆ | - | 100 |
| 9) | ಬಿಜಾಪುರ ಜಿಲ್ಲೆ | - | 162 |
| 10) | ಕೋಲಾರ ಜಿಲ್ಲೆ | - | 50 |
| | ಒಟ್ಟು | | 1589 |

ಇ) ಇಲ್ಲ.